

FOREST DEPARTMENT
KARNATAKA

isha

ನದಿಗಳನ್ನು ರಕ್ಷಿಸಿ
ಭಾರತದ ಜೀವನದಿಗಳು

ಇಂದೇ ಕಣಕ್ಕೆ!

ಕಾವೇರಿ ಕೂಗು

# ನಿಮ್ಮ ಮರಗಳ ಬಗ್ಗೆ ತಿಳಿಯಿರಿ

# ಇಂಡಿಯನ್ ರೋಸ್ ವುಡ್ / ದಾಲ್ಬರ್ಜಿಯಾ ಲ್ಯಾಟಿಫೋಲಿಯಾ / ಬೀಟೆ (ಗಟ್ಟಿ ಮರ)



ಶ್ರೀಗಂಧದ ಮರ ಮತ್ತು ಕೆಂಪು ಸ್ಯಾಂಡರ್‌ಗಳ ನಂತರ, ಈ ಮರವು ಅತಿ ಹೆಚ್ಚಿನ ಮೌಲ್ಯವನ್ನು ಉತ್ಪಾದಿಸುತ್ತದೆ. ಇದರ ಮರವನ್ನು ದುಬಾರಿ ಹಾಗೂ ಶ್ರೀಮಂತಿಕೆಯ ಪೀಠೋಪಕರಣಗಳು, ಅಲಂಕಾರಿಕ ಪೀಠೋಪಕರಣಗಳು, ಕ್ಯಾಬಿನೆಟ್‌ಗಳು, ಪ್ರಯಾಣಿಕರ ಹಡಗುಗಳು ಮತ್ತು ವೈವಿಧ್ಯಮಯವಾದ ವಾದ್ಯಗಳ ಪೆಟ್ಟಿಗೆ ತಯಾರಿಸಲು ಬಳಸಲಾಗುತ್ತದೆ. ಇದನ್ನು ಉನ್ನತ ದರ್ಜೆಯ ಪ್ಲೈವುಡ್ ತಯಾರಿಸಲು ಬಳಸಲಾಗುತ್ತದೆ ಮತ್ತು ಅದರ ಸುಂದರವಾದ ಬಣ್ಣ ಮತ್ತು ವಿನ್ಯಾಸದಿಂದಾಗಿ ಅಲಂಕಾರಿಕ ಮರದ ಹೊದಿಕೆಗಳನ್ನು ಮಾಡಲು ಬಳಸಲಾಗುತ್ತದೆ. ಅದರ ಶಕ್ತಿ ಮತ್ತು ಬಾಳಿಕೆಯ ಕಾರಣ, ಇದು ಎಲ್ಲಾ ರೀತಿಯ ನಿರ್ಮಾಣ ಕಾರ್ಯಗಳು, ಬಾಗಿಲುಗಳು, ಕಿಟಕಿ ಚೌಕಟ್ಟುಗಳು ಮತ್ತು ವ್ಯಾಗನ್ ನಿರ್ಮಾಣಕ್ಕೆ ಸೂಕ್ತವಾಗಿದೆ. ಕೆತ್ತನೆಗಾಗಿ ಇದು ಹೆಚ್ಚು ಆದ್ಯತೆಯ ಮರಗಳಲ್ಲಿ ಒಂದಾಗಿದೆ. ಇದು ತಿರುಗಣೆ ಅಚ್ಚಿನಿಂದ ಮಾಡುವ ವಿನ್ಯಾಸಗಳ ತಯಾರಿಕೆಗೆ ಸೂಕ್ತವಾಗಿದೆ ಮತ್ತು ಮರವನ್ನು ಬಾಗಿಸಿ ಮಾಡುವ ಉನ್ನತ ದರ್ಜೆಯ ಪೀಠೋಪಕರಣಗಳು, ಊರುಗೋಲು, ಛತ್ರಿಯ ಹಿಡಿಕೆಗಳು ಮತ್ತು ಮರವನ್ನು ಬಾಗಿಸಿ ತಯಾರಿಸುವ ಇನ್ನಿತರ ಪದಾರ್ಥಗಳ ತಯಾರಿಕೆಗೆ ಇದು ಅತ್ಯುತ್ತಮವಾಗಿದೆ. ಇದನ್ನು ಸಂಗೀತ ಉಪಕರಣಗಳು ಮತ್ತು ಕ್ರೀಡಾ ಉಪಕರಣಗಳನ್ನು ತಯಾರಿಸಲು ಸಹ ಬಳಸಲಾಗುತ್ತದೆ.

**ಇದನ್ನು 20 ವರ್ಷಗಳ ನಂತರ ಟಿಂಬರ್ ಉದ್ದೇಶಗಳಿಗಾಗಿ ಬಳಸಬಹುದು**

**500 - 750 ಕೆಜಿ / ಮರಕ್ಕೆ • ರೂ.1 ಲಕ್ಷ / ಟನ್.**

**ಪ್ರತಿ ಮರದ ಬೆಲೆ: ರೂ.50,000 – ರೂ.75,000.**

**ಮಣ್ಣಿನ ಅವಶ್ಯಕತೆ:**

ಕ್ಷಾರೀಯ ಮತ್ತು ಆಮ್ಲೀಯವನ್ನು ಹೊರತುಪಡಿಸಿ ತಟಸ್ಥ ರಸಸಾರದ ಎಲ್ಲಾ ರೀತಿಯ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ಸುತ್ತಳತೆಯ ಗಾತ್ರವು ಮಣ್ಣಿನ ಆಳಕ್ಕೆ ಅನುಗುಣವಾಗಿ ಹೆಚ್ಚಾಗುತ್ತದೆ.

**ನೀರಿನ ಅವಶ್ಯಕತೆ:**

ಈ ಪ್ರಭೇದಕ್ಕೆ ನೀರಾವರಿ ಅಗತ್ಯವಿರುತ್ತದೆ ಮತ್ತು ಮಳೆಗಾಲ ಬಂದಾಗ ಸೊಂಪಾಗಿ ಬೆಳೆಯುತ್ತದೆ. ಮರಗಳ ಉಳಿವನ್ನು ಖಚಿತಪಡಿಸಿಕೊಳ್ಳಲು ಮುಚ್ಚಿಗೆ (mulching) ಕಡ್ಡಾಯವಾಗಿದೆ.

**ಸಮುದ್ರ ಮಟ್ಟದಿಂದ ಎತ್ತರ:**

0- 1500 ಮೀಟರ್ ವರಗೆ

**ಸರಾಸರಿ ವಾರ್ಷಿಕ ತಾಪಮಾನ:**

8-44˚C

**ಸರಾಸರಿ ವಾರ್ಷಿಕ ಮಳೆ:**

750-5,000 ಮಿ.ಮೀ.



# ಮಲಬಾರ್ ಪ್ಲಮ್ / ಸೈಜಿಗಿಯಮ್ ಕ್ಯುಮಿನಿ / ನೇರಳೆ (ಗಟ್ಟಿ ಮರ)



ಈ ಮರದ ದಿಮ್ಮಿಯನ್ನು ಬಾವಿಗಳಲ್ಲಿ ಮೋಟಾರ್ ಅಳವಡಿಸಲು ಬಳಸಲಾಗುತ್ತದೆ. ಮರ ನೀರಿನಲ್ಲಿ ಕೆಡುವುದಿಲ್ಲ ಮತ್ತು ಇದನ್ನು ಗೆದ್ದಲು ತಿನ್ನುವುದಿಲ್ಲ. ಇದರೊಂದಿಗೆ ಕೆಲಸ ಮಾಡುವುದು ಕಷ್ಟವಾದರೂ, ಮರವನ್ನು ಗರಗಸದಿಂದ ಚೆನ್ನಾಗಿ ಕತ್ತರಿಸಬಹುದು. ಇದನ್ನು ಕಟ್ಟಡ ನಿರ್ಮಾಣ, ದೋಣಿ ನಿರ್ಮಾಣ, ಚೆಸ್ಟ್ ಪ್ಲೈವುಡ್, ಕೃಷಿ ಉಪಕರಣಗಳು, ಉಪಕರಣಗಳ ಹಿಡಿಕೆಗಳಿಗೆ, ಗಾಡಿ ಚಕ್ರಗಳು, ಬಾವಿ ಕಟ್ಟೆ ಮತ್ತು ತೊಟ್ಟಿಗಳು, ರೈಲಿನ ಸ್ಲೀಪರ್‌ಗಳು, ಪೀಠೋಪಕರಣಗಳು ಮತ್ತು ಗಣಿಗಳಲ್ಲಿನ ಶಾಫ್ಟ್‌ಗಳು ಮತ್ತು ಗ್ಯಾಲರಿಗಳಿಗೆ ಆಧಾರಗಳಾಗಿ ಬಳಸಲಾಗುತ್ತದೆ. ಸೇತುವೆಗಳನ್ನು ನಿರ್ಮಿಸಲು ಮತ್ತು ಸಂಗೀತ ವಾದ್ಯಗಳನ್ನು ತಯಾರಿಸಲು, ವಿಶೇಷವಾಗಿ ಗಿಟಾರ್‌ಗಳಲ್ಲಿ ಬಳಸಲಾಗುತ್ತದೆ.

**ಹಣ್ಣಿನ ಇಳುವರಿ:** ಪ್ರತಿ ಮರವು 7 ಅಥವಾ 8 ವರ್ಷಗಳ ನಂತರ ವರ್ಷಕ್ಕೆ ರೂ. 5,000 ಮೌಲ್ಯದ ಹಣ್ಣುಗಳನ್ನು ಉತ್ಪಾದಿಸುತ್ತದೆ.

**ಇದನ್ನು 20 ವರ್ಷಗಳ ನಂತರ ಟಿಂಬರ್ ಉದ್ದೇಶಗಳಿಗಾಗಿ ಬಳಸಬಹುದು**

**ಪ್ರತಿ ಮರದ ಮೌಲ್ಯ: ರೂ. 10,000 - ರೂ 12,000.**

**ಮಣ್ಣಿನ ಅವಶ್ಯಕತೆ:**

ಎಲ್ಲಾ ರೀತಿಯ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ಸುತ್ತಳತೆಯ ಗಾತ್ರವು ಮಣ್ಣಿನ ಆಳಕ್ಕೆ ಅನುಗುಣವಾಗಿ ಹೆಚ್ಚಾಗುತ್ತದೆ.

**ನೀರಿನ ಅವಶ್ಯಕತೆ:**

ಇದರ ಬರ ಸಹಿಷ್ಣುತೆ ಗುಣ ಮಧ್ಯಮವಾಗಿದ್ದು, ಮಳೆ ಆಶ್ರಯ ಬೇಕಾಗುತ್ತದೆ. ಮರಗಳ ಉಳಿವಿಗಾಗಿ ಮುಚ್ಚಿಗೆ (mulching) ಕಡ್ಡಾಯವಾಗಿದೆ.

**ಸಮುದ್ರ ಮಟ್ಟದಿಂದ ಎತ್ತರ:**

0-1800 ಮೀಟರ್ ಸೂಕ್ತ ಎತ್ತರವಾಗಿದೆ.

**ಸರಾಸರಿ ವಾರ್ಷಿಕ ತಾಪಮಾನ:**

-2 ರಿಂದ 48 ಡಿಗ್ರಿ ಸೆಂಟಿಗ್ರೇಡ್

**ಸರಾಸರಿ ವಾರ್ಷಿಕ ಮಳೆ:**

900-1200 ಮಿ.ಮೀ.



# ಸಿಲ್ವರ್ ಗ್ರೇ ವುಡ್ / ಟರ್ಮಿನೇಲಿಯಾ ಟೊಮೆಂಟೋಸಾ / ಮತ್ತಿ (ಗಟ್ಟಿ ಮರ)



ಇದರ ಬೂದು ಮಿಶ್ರಿತ ಕಂದು ಬಣ್ಣದ ಮರದ ದಿಮ್ಮಿಗಳನ್ನು ಎತ್ತಿನ ಗಾಡಿಗಳು ಮತ್ತು ದೋಣಿಗಳ ನಿರ್ಮಾಣಕ್ಕಾಗಿ ಬಳಸಲಾಗುತ್ತದೆ. ಇದರ ಟಿಂಬರ್ ಅನ್ನು ನಿರ್ಮಾಣ ಚಟುವಟಿಕೆಗಳಲ್ಲಿ ಸಾಮಾನ್ಯವಾಗಿ ಬಳಸಲಾಗುತ್ತದೆ. ಅಲ್ಲದೇ ಕೃಷಿ ಉಪಕರಣಗಳು, ನೀರಿನ ಬಾನಿಗಳು, ಬೋನುಗಳು (ಟ್ರ್ಯಾಪ್), ವಿದ್ಯುತ್ ಕಂಬಗಳು, ಪ್ಲೈವುಡ್ ಮತ್ತು ಅಲಂಕಾರಿಕ ಹೊದಿಕೆ -ವಿನೀರ್ ತಯಾರಿಕೆಗೆ ಬಳಸಲಾಗುತ್ತದೆ. ವನ್ಯ ರೇಷ್ಮೆಯ ಒಂದು ಜಾತಿಯಾದ ಟಸ್ಸರ್ ರೇಷ್ಮೆ ಹುಳುಗಳ ಸಾಕಾಣಿಕೆಗೆ ಈ ಮರದ ಎಲೆಗಳನ್ನು ಬಳಕೆ ಮಾಡಲಾಗುತ್ತದೆ.

**ಇದನ್ನು 20 ವರ್ಷಗಳ ನಂತರದಲ್ಲಿ ಟಿಂಬರ್ ಉದ್ದೇಶಗಳಿಗಾಗಿ ಬಳಸಬಹುದು.**

**ಪ್ರತಿ ಮರದ ಪರಿಮಾಣ: 30 - 40 ಘನ ಅಡಿ**

**ಪ್ರತಿ ಘನ ಅಡಿಯ ಬೆಲೆ – ರೂ. 500**

**ಪ್ರತಿ ಮರದ ಬೆಲೆ: ರೂ. 15,000 – ರೂ 20,000**

**ಮಣ್ಣಿನ ಅವಶ್ಯಕತೆ:**

ಇದನ್ನು ಎಲ್ಲಾ ಮಣ್ಣಿನ ಪ್ರಕಾರಗಳಲ್ಲಿ ಬೆಳೆಸಬಹುದು. ಸುತ್ತಳತೆಯ ಗಾತ್ರವು ಮಣ್ಣಿನ ಆಳಕ್ಕೆ ಅನುಗುಣವಾಗಿ ಹೆಚ್ಚಾಗುತ್ತದೆ.

**ನೀರಿನ ಅವಶ್ಯಕತೆ:**

ಬರವನ್ನು ತಾಳಿ ಬೆಳೆಯುವ ಈ ಮರಗಳು ಮಳೆಯಾಶ್ರಿತ ಮತ್ತು ನೀರಾವರಿ ಸ್ಥಿತಿಯಲ್ಲಿ ಚೆನ್ನಾಗಿ ಬೆಳೆಯುತ್ತವೆ. ಮರಗಳ ಉಳಿವಿಗಾಗಿ ಮುಚ್ಚಿಗೆ (mulching) ಅಗತ್ಯ.

**ಸೂಕ್ತ ಆಲ್ಟಿಟ್ಯೂಡ್:**

ಸಮುದ್ರ ಮಟ್ಟದಿಂದ 0-1000 ಮೀಟರ್ ಎತ್ತರದವರೆಗೆ ಬೆಳೆಯುತ್ತವೆ.

**ಸರಾಸರಿ ವಾರ್ಷಿಕ ತಾಪಮಾನ:**

22-28 ಡಿಗ್ರಿ ಸೆಂಟಿಗ್ರೇಡ್

**ಸರಾಸರಿ ವಾರ್ಷಿಕ ಮಳೆ:**

900-3000 ಮಿ.ಮೀ



# ಮಲಬಾರ್ ಕಿನೋ / ಟೀರೊಕಾರ್ಪಸ್ ಮಾರ್ಸುಪಿಯಂ / ಹೊನ್ನೆ (ಗಟ್ಟಿ ಮರ)



ದಕ್ಷಿಣ ಭಾರತದಲ್ಲಿ ಈ ಮರವು ಅತ್ಯುತ್ತಮ ಮರದ ದಿಮ್ಮಿಗಳಿಗೆ ಹೆಸರುವಾಸಿಯಾಗಿದೆ. ತೇಗ ಮತ್ತು ಬೀಟೆ ಮರಗಳ ನಂತರದ ಸ್ಥಾನದಲ್ಲಿದೆ. ಇದರ ಮರವನ್ನು ಬಾಗಿಲುಗಳು, ಕಿಟಕಿ ಚೌಕಟ್ಟುಗಳು, ಜಂತೆ - ತೊಲೆಗಳು ಮತ್ತು ಕೈಮರಗಳನ್ನು ತಯಾರಿಸಲು ಹಾಗೂ ಸೂಕ್ತವಾಗಿ ಹದಗೊಳಿಸಿದ ನಂತರ ತೇಗಕ್ಕೆ ಬದಲಿಯಾಗಿ ಬಳಸಲಾಗುತ್ತದೆ. ರೈಲ್ವೆ ಬೋಗಿಗಳು, ವ್ಯಾಗನ್‌ಗಳು, ಎತ್ತಿನ ಗಾಡಿ, ದೋಣಿಗಳು ಮತ್ತು ಕೆಲವೊಮ್ಮೆ ಹಡಗು ನಿರ್ಮಾಣಕ್ಕಾಗಿಯೂ ಇದನ್ನು ಬಳಸಲಾಗುತ್ತದೆ.

**ಇದನ್ನು 15 ವರ್ಷಗಳ ನಂತರ ಟಿಂಬರ್ ಉದ್ದೇಶಗಳಿಗಾಗಿ ಬಳಸಬಹುದು**

**ಪ್ರತಿ ಮರದ ಪರಿಮಾಣ: 20 – 25 ಘನ ಅಡಿ**

**ಪ್ರತಿ ಘನ ಅಡಿಯ ಬೆಲೆ – ರೂ. 500**

**ಪ್ರತಿ ಮರದ ಬೆಲೆ: ರೂ. 10,000 – ರೂ 12,500**

### ಮಣ್ಣಿನ ಅವಶ್ಯಕತೆ:
ಎಲ್ಲಾ ರೀತಿಯ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ಸುತ್ತಳತೆಯ ಗಾತ್ರವು ಮಣ್ಣಿನ ಆಳಕ್ಕೆ ಅನುಗುಣವಾಗಿ ಹೆಚ್ಚಾಗುತ್ತದೆ.

### ನೀರಿನ ಅವಶ್ಯಕತೆ:
ಈ ಜಾತಿಯು ಬರ ಸಹಿಷ್ಣುವಾಗಿದ್ದರೂ, ಇದಕ್ಕೆ ಮಳೆ ಬೇಕು. ಮರಗಳ ಉಳಿವನ್ನು ಖಚಿತಪಡಿಸಿಕೊಳ್ಳಲು ಮುಚ್ಚಿಗೆ (mulching) ಕಡ್ಡಾಯವಾಗಿದೆ.

### ಸಮುದ್ರ ಮಟ್ಟದಿಂದ ಎತ್ತರ:
1050 ಮೀಟರ್ ವರಗೆ

### ಸರಾಸರಿ ವಾರ್ಷಿಕ ತಾಪಮಾನ:
22-34ಡಿಗ್ರಿ ಸೆಂಟಿಗ್ರೇಡ್ (4 - 47 ಡಿಗ್ರಿ ಸಹಿಸಿಕೊಳ್ಳಬಲ್ಲದು)

### ಸರಾಸರಿ ವಾರ್ಷಿಕ ಮಳೆ:
1,000 - 1,500 ಮಿ.ಮೀ., 750ಮಿ.ಮೀ - 2,000ಮಿ.ಮೀ ವರೆಗೂ ತಾಳಬಲ್ಲದು

ಈ ಪ್ರಭೇದವು ಸ್ಪಷ್ಟವಾಗಿ ಶುಷ್ಕ ಹವಾಮಾನವಿರುವ ಪ್ರದೇಶಗಳಲ್ಲಿ ಕಂಡುಬರುತ್ತದೆ



# ಜ್ಯಾಕ್ ಫ್ರೂಟ್ / ಆರ್ಟೋಕಾರ್ಪಸ್ ಹೆಟೆರೊಫಿಲಸ್/ ಹಲಸು (ಗಟ್ಟಿ ಮರ)



ಈ ಜಾತಿಯ ಮರಗಳು ಉತ್ತಮ-ಗುಣಮಟ್ಟದ ಟಿಂಬರ್ ಅನ್ನು ಉತ್ಪಾದಿಸುತ್ತವೆ, ಇದು ತೇಗಕ್ಕಿಂತ ಉತ್ತಮವಾಗಿದೆ. ಇದು ನಯವಾದ, ಬಲವಾದ, ಗಟ್ಟಿಯಾದ ಮತ್ತು ಬಾಳಿಕೆ ಬರುವ ಮರವಾಗಿದ್ದು ಲಘು ನಿರ್ಮಾಣಗಳಲ್ಲಿ ಬಳಸಲಾಗುತ್ತದೆ, ನೆಲಹಾಸು ಅಚ್ಚುಗಳು, ಸಂಗೀತ ಉಪಕರಣಗಳು, ಪಾತ್ರೆಗಳು ಮತ್ತು ವಾಹನಗಳ ಕವಚ ರಚನೆಗೆ ಉಪಯುಕ್ತ. ನೀರೊಳಗೆ ಬಹಳ ಬಾಳಿಕೆ ಬರುವ ಕಾರಣ ದೋಣಿ ನಿರ್ಮಾಣಕ್ಕೂ ಇದು ಜನಪ್ರಿಯವಾಗಿದೆ.

8 ನೇ ವರ್ಷದ ನಂತರ ಹಣ್ಣಿನ ಇಳುವರಿ: ರೂ. 5,000 / ಮರ (ಪ್ರತಿ ಮರವು ವಾರ್ಷಿಕವಾಗಿ 50 ಹಣ್ಣುಗಳನ್ನು ಉತ್ಪಾದಿಸುತ್ತದೆ; ಪ್ರತಿ ಹಣ್ಣು ರೂ. 100 ಮೌಲ್ಯದ್ದಾಗಿದೆ). ಮರಕ್ಕೆ ವಯಸ್ಸಾದಂತೆ ಇಳುವರಿ ಹೆಚ್ಚಾಗುತ್ತದೆ.

**ಇದನ್ನು 25 ವರ್ಷಗಳ ನಂತರ ಟಿಂಬರ್ ಉದ್ದೇಶಗಳಿಗಾಗಿ ಬಳಸಬಹುದು**

**ಪ್ರತಿ ಮರದ ಬೆಲೆ: ರೂ. 10,000 (ಕನಿಷ್ಠ )**

**ಮಣ್ಣಿನ ಅವಶ್ಯಕತೆ:**

ಎಲ್ಲಾ ಮಣ್ಣಿನ ಪ್ರಕಾರಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಮಣ್ಣಿನ ಆಳಕ್ಕೆ ಅನುಗುಣವಾಗಿ ಸುತ್ತಳತೆಯ ಗಾತ್ರವು ಹೆಚ್ಚಾಗುತ್ತದೆ.

**ನೀರಿನ ಅವಶ್ಯಕತೆ:**

ಬರ ಸಹಿಷ್ಣು ಮರವಾಗಿದ್ದರೂ ನೀರಾವರಿ ಅಗತ್ಯವಿದೆ. ಇದಕ್ಕೆ ಮಾಸಿಕ ಎರಡು ಬಾರಿ ಕನಿಷ್ಠ ಪ್ರಮಾಣದ ನೀರು ಬೇಕಾಗುತ್ತದೆ. ಮರಗಳ ಉಳಿವನ್ನು ಖಚಿತಪಡಿಸಿಕೊಳ್ಳಲು ಮುಚ್ಚಿಗೆ (mulching) ಕಡ್ಡಾಯವಾಗಿದೆ.

**ಸಮುದ್ರ ಮಟ್ಟದಿಂದ ಎತ್ತರ:**

ಹಲಸಿನ ಮರಗಳು ಸಾಮಾನ್ಯವಾಗಿ ಕಡಿಮೆ ಸಮುದ್ರ ಮಟ್ಟಕ್ಕೆ ಆದ್ಯತೆ ನೀಡುತ್ತವೆ. ಸಮುದ್ರ ಮಟ್ಟದಲ್ಲಿಯೂ ಬದುಕಬಲ್ಲವು; 1,600 ಮೀಟರ್ ನಷ್ಟು ಹೆಚ್ಚಿನ ಎತ್ತರದಲ್ಲೂ ಉತ್ತಮವಾಗಿ ಬೆಳೆಯುತ್ತವೆ.

**ಸರಾಸರಿ ವಾರ್ಷಿಕ ತಾಪಮಾನ:**

16˚C ನಿಂದ 22˚C.

**ಸರಾಸರಿ ವಾರ್ಷಿಕ ಮಳೆ:**

1,000-2,400 ಮಿ.ಮೀ.



# ನೀಮ್ / ಅಜಡಿರಕ್ಟ ಇಂಡಿಕ / ಬೇವು

(ಗಟ್ಟಿ ಮರ)



ವಿವಿಧೋದ್ದೇಶ ಬಳಕೆಯಿಂದಾಗಿ ಬೇವನ್ನು ಪವಾಡ ಮರ ಎಂದು ಜನಪ್ರಿಯವಾಗಿ ಕರೆಯಲಾಗುತ್ತದೆ. ಇದರ ಮರವನ್ನು ಬಟ್ಟೆ ಇಡುವ ಕಪಾಟು, ಪುಸ್ತಕದ ಕಪಾಟುಗಳು ಹಾಗೂ ಇತರ ವಸ್ತುಗಳ ಬೀರುಗಳನ್ನು ಮಾಡಲು ಬಳಸಲಾಗುತ್ತದೆ. ಜೊತೆಗೆ ಇದರ ಕೀಟ ನಿರೋಧಕ ಗುಣದಿಂದಾಗಿ ಪ್ಯಾಕಿಂಗ್ ಬಾಕ್ಸ್ ಗಳನ್ನು ಮಾಡಲೂ ಬಳಸಲಾಗುತ್ತದೆ. ಬೇವಿನ ಬೀಜಗಳು ಮತ್ತು ಎಣ್ಣೆ ಸಾವಯವ ಕೃಷಿಯಲ್ಲಿ ಬಹಳ ಪ್ರಮುಖ ಒಳಸುರಿಗಳಾಗಿರುವುದರಿಂದ ಮುಂದಿನ ಕೆಲವು ವರ್ಷಗಳಲ್ಲಿ ಬೇವಿನ ಉತ್ಪನ್ನಗಳ ಬೇಡಿಕೆ ತೀವ್ರವಾಗಿ ಹೆಚ್ಚಾಗುವ ನಿರೀಕ್ಷೆಯಿದೆ.

**ಬೀಜಗಳಿಂದ ಇಳುವರಿ:**

5 ವರ್ಷಗಳ ನಂತರ: ಎಕರೆಗೆ ವಾರ್ಷಿಕ ರೂ 25,000. 15 ನೇ ವರ್ಷದಲ್ಲಿ, ಇಳುವರಿ 5 ನೇ ವರ್ಷಕ್ಕಿಂತ ಎರಡು ಪಟ್ಟು ಹೆಚ್ಚಾಗುತ್ತದೆ.

**ಇದನ್ನು 20-25 ವರ್ಷಗಳ ನಂತರ ಟಿಂಬರ್ ಉದ್ದೇಶಗಳಿಗಾಗಿ ಬಳಸಬಹುದು**

**ಪ್ರತಿ ಮರದ ಪರಿಮಾಣ: 30 – 40 ಘನ ಅಡಿ**

**ಪ್ರತಿ ಘನ ಅಡಿಯ ಬೆಲೆ – ರೂ. 300**

**ಪ್ರತಿ ಮರದ ಬೆಲೆ: ರೂ. 9,000– ರೂ 12,000**

**ಮಣ್ಣಿನ ಅವಶ್ಯಕತೆ:**

ಎಲ್ಲಾ ರೀತಿಯ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ಸುತ್ತಳತೆಯ ಗಾತ್ರವು ಮಣ್ಣಿನ ಆಳಕ್ಕೆ ಅನುಗುಣವಾಗಿ ಹೆಚ್ಚಾಗುತ್ತದೆ.

**ನೀರಿನ ಅವಶ್ಯಕತೆ:**

ಮರವು ಮಳೆಯಾಶ್ರಿತ ಪರಿಸ್ಥಿತಿಯಲ್ಲಿ ಬೆಳೆಯುತ್ತದೆ ಮತ್ತು ಹೆಚ್ಚು ಬರ ಸಹಿಷ್ಣುವಾಗಿದೆ. ಮರಗಳ ಉಳಿವನ್ನು ಖಚಿತಪಡಿಸಿಕೊಳ್ಳಲು ಮುಚ್ಚಿಗೆ (mulching) ಕಡ್ಡಾಯವಾಗಿದೆ.

**ಸಮುದ್ರ ಮಟ್ಟದಿಂದ ಎತ್ತರ:**

0-1500 ಮೀಟರ್

**ಸರಾಸರಿ ವಾರ್ಷಿಕ ತಾಪಮಾನ:**

40 ಡಿಗ್ರಿ ಸೆಂಟಿಗ್ರೇಡ್ ತನಕ

**ಸರಾಸರಿ ವಾರ್ಷಿಕ ಮಳೆ:**

400-1200 ಮಿ.ಮೀ.



# ಕುಮಿಲ್ ತೇಗ / ಮೆಲೈನ ಆರ್ಬೋರಿಯಾ / ಶಿವನೆ

(ಗಟ್ಟಿ ಮರ)



ಮರಗೆಲಸದಲ್ಲಿ ಅತ್ಯುತ್ತಮ ಗುಣಗಳಿಗೆ ಹೆಸರುವಾಸಿಯಾದ ಈ ಮರದ ದಿಮ್ಮಿಯನ್ನು ನಿರ್ಮಾಣ, ಮರಗೆಲಸ, ಪ್ಯಾಕೇಜಿಂಗ್, ಕೆತ್ತನೆಗಳು, ಸಂಗೀತ ಉಪಕರಣಗಳು, ದಿನಬಳಕೆಯ ಪೀಠೋಪಕರಣಗಳು, ಅಲಂಕಾರಿಕ ವೀನರ್ಸ್(ಹೊದಿಕೆ) ಮತ್ತು ವಾಹನಗಳ ಮೇಲ್ಭಾಗಗಳಲ್ಲಿ ಬಳಸಲಾಗುತ್ತದೆ. ಮರವನ್ನು ಲಘು ನೆಲಹಾಸು, ಬೆಂಕಿಕಡ್ಡಿಗಳು, ಪಾರ್ಟಿಕಲ್ ಬೋರ್ಡ್, ಗಣಿಗಳಲ್ಲಿ ದಿಮ್ಮಿಗಳಾಗಿ , ವಾಹನಗಳ ಕವಚ ನಿರ್ಮಾಣ ಮತ್ತು ಹಡಗು ನಿರ್ಮಾಣಕ್ಕೆ ಬಳಸಲಾಗುತ್ತದೆ. ಇದು ಉತ್ತಮ-ಗುಣಮಟ್ಟದ ತಿರುಳನ್ನು ಉತ್ಪಾದಿಸುತ್ತದೆ, ಇದು ಉನ್ನತ ದರ್ಜೆಯ ಬರವಣಿಗೆಯ ಕಾಗದದ ಉತ್ಪಾದನೆಗೆ ಸೂಕ್ತವಾಗಿದೆ.

**ಇದನ್ನು 7-10 ವರ್ಷಗಳ ನಂತರ ಟಿಂಬರ್ ಉದ್ದೇಶಗಳಿಗಾಗಿ ಬಳಸಬಹುದು**

**500-750 ಕೆಜಿ ದಿನ್ನೆ / ಮರ • ಪ್ರತಿ ಟನ್‌ಗೆ ರೂ. 8,000- ರೂ. 12,000.**

**ಪ್ರತಿ ಮರದ ಮೌಲ್ಯ: ರೂ. 4,000 - ರೂ 6,000.**

**ಮಣ್ಣಿನ ಅವಶ್ಯಕತೆ:**

ಎಲ್ಲಾ ರೀತಿಯ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ಈ ಪ್ರಭೇದಕ್ಕೆ ಉತ್ತಮ ಮಣ್ಣಿನ ಆಳ ಬೇಕಾಗುತ್ತದೆ - ಕನಿಷ್ಠ 5 ಅಡಿ ಆಳ ಅವಶ್ಯಕ.

**ನೀರಿನ ಅವಶ್ಯಕತೆ:**

ಮರವು ಬರ ತಾಳಿಕೊಳ್ಳಲಾರದು. ಮರಗಳ ಉಳಿವನ್ನು ಖಚಿತಪಡಿಸಿಕೊಳ್ಳಲು ನೀರಾವರಿ ಮತ್ತು ಮುಚ್ಚಿಗೆ (mulching) ಕಡ್ಡಾಯವಾಗಿದೆ.

**ಸಮುದ್ರ ಮಟ್ಟದಿಂದ ಎತ್ತರ:**

0-1200ಮೀಟರ್ ವರಗೆ

**ಸರಾಸರಿ ವಾರ್ಷಿಕ ತಾಪಮಾನ:**

20-28ಡಿಗ್ರಿ ಸೆಂಟಿಗ್ರೇಡ್

**ಸರಾಸರಿ ವಾರ್ಷಿಕ ಮಳೆ:**

750-4500 ಮಿ.ಮೀ.



# ಹಾರ್ಟ್ ಲೀಫ್ ಅಡಿನಾ / ಹಲ್ದಿನಾ (ಅಡೆನಾ) ಕಾರ್ಡಿಫ್ಲೋಲಿಯಾ / (ಅರಿಶಿನ ತೇಗ / ಹೆತ್ಯಾಗ)

(ಗಟ್ಟಿ ಮರ)



ಈ ಮರವು ಉತ್ತಮ-ಗುಣಮಟ್ಟದ ಟಿಂಬರ್ ಅನ್ನು ಉತ್ಪಾದಿಸುತ್ತದೆ, ಇದು ದೇಶದಲ್ಲಿ ಉತ್ಪಾದಿಸಲಾಗುವ ಅತ್ಯುತ್ತಮ ಟಿಂಬರ್‌ಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಈ ಮರದ ಟಿಂಬರ್ ನೆಲಹಾಸಿಗಾಗಿ, ಗೋಡೆಗೆ ಮೇಲ್ಪದರವಾಗಿ ಅಂಟಿಸಲು, ರೈಲ್ವೆ ಬೋಗಿಗಳನ್ನು ತಯಾರಿಸಲು ಸೂಕ್ತವಾಗಿದೆ. ಕಾಗದ, ನಿರ್ಮಾಣ ಚಟುವಟಿಕೆ, ಕಿಟಕಿ ಚೌಕಟ್ಟುಗಳು, ಪೀಠೋಪಕರಣಗಳು, ಬಾಬಿನ್‌ಗಳು, ಪಿಯಾನೋ ಕೀಗಳು, ಅಡಿಗೋಲು ಮತ್ತು ಪೆನ್ಸಿಲ್ ತಯಾರಿಕೆಗೆ ಸಹ ಇದನ್ನು ಬಳಸಲಾಗುತ್ತದೆ. ಈ ಮರವು ನೀರಿನಲ್ಲಿ ಬಾಳಿಕೆ ಬರುವಂತಹುದು, ಅದ್ದರಿಂದ ಮೀನುಗಾರಿಕೆಯ ದೋಣಿ ಮತ್ತು ಸಣ್ಣ ಹಡಗುಗಳ ಮತ್ತು ಬಂದರಿನಲ್ಲಿನ ರಚನೆಗಳನ್ನು ಮಾಡಲು ಸಹ ಬಳಸಲಾಗುತ್ತದೆ.

**ಇದನ್ನು 20 ವರ್ಷಗಳ ನಂತರ ಟಿಂಬರ್ ಉದ್ದೇಶಗಳಿಗಾಗಿ ಬಳಸಬಹುದು**

**ಪ್ರತಿ ಮರದ ಪರಿಮಾಣ: 20 – 25 ಘನ ಅಡಿ**

**ಪ್ರತಿ ಘನ ಅಡಿಯ ಬೆಲೆ – ರೂ. 500**

**ಪ್ರತಿ ಮರದ ಬೆಲೆ: ರೂ. 10,000 – ರೂ 12,500**

**ಮಣ್ಣಿನ ಅವಶ್ಯಕತೆ:**

ಇದನ್ನು ಎಲ್ಲಾ ಮಣ್ಣಿನ ಪ್ರಕಾರಗಳಲ್ಲಿ ಬೆಳೆಸಬಹುದು. ಸುತ್ತಳತೆಯ ಗಾತ್ರವು ಮಣ್ಣಿನ ಆಳಕ್ಕೆ ಅನುಗುಣವಾಗಿ ಹೆಚ್ಚಾಗುತ್ತದೆ.

**ನೀರಿನ ಅವಶ್ಯಕತೆ:**

ಇದು ಮಳೆಯಾಶ್ರಿತ ಪರಿಸ್ಥಿತಿಯಲ್ಲಿ ಸರಿಯಾಗಿ ಬೆಳೆಯುತ್ತದೆಯಾದರೂ ಬರಗಾಲವನ್ನೂ ತಕ್ಕಮಟ್ಟಿಗೆ ತಾಳಿಕೊಳ್ಳುತ್ತದೆ.. ಮರಗಳ ಉಳಿವಿಗಾಗಿ ಮುಚ್ಚಿಗೆ (mulching) ಕಡ್ಡಾಯವಾಗಿದೆ.

**ಸಮುದ್ರ ಮಟ್ಟದಿಂದ ಎತ್ತರ:**

1000 ಮೀಟರ್ ವರೆಗೆ

**ಸರಾಸರಿ ವಾರ್ಷಿಕ ತಾಪಮಾನ:**

ದೈನಂದಿನ ತಾಪಮಾನ 25-35˚C (– 5˚C ರಷ್ಟು ಕಡಿಮೆ ಇಂದ 47˚C ರಷ್ಟು ಅಧಿಕ ತಾಪಮಾನವನ್ನು ಸಹಿಸಿಕೊಳ್ಳಬಲ್ಲದು)

**ಸರಾಸರಿ ವಾರ್ಷಿಕ ಮಳೆ:**

1,000-2,000 ಮಿ.ಮೀ (800 ಮಿ.ಮೀ ಅಷ್ಟು ಕಡಿಮೆ ಮಳೆ ಮತ್ತು 4,500 ಮಿ.ಮೀ ಅಷ್ಟು ಹೆಚ್ಚು ಮಳೆಯಲ್ಲಿ ಬದುಕಬಲ್ಲದು)



# ಮಹೋಗನಿ / ಸ್ವೀಟೆನಿಯಾ ಮಹಾಗೋನಿ / ಮಹಾಗನಿ (ಗಟ್ಟಿ ಮರ)



ಈ ಜಾತಿಯ ಮರಗಳ ದಿಮ್ಮಿಗಳಲ್ಲಿ ಮರಗೆಲಸ ಮಾಡುವುದು ಸುಲಭ. ತುಂಬಾ ದೃಢತೆ ಉಳ್ಳದ್ದು ಮತ್ತು ನೀರಿನಲ್ಲಿ ಕೊಳೆಯದಿರುವ ಗುಣ ಹೊಂದಿದೆ. ಫಲಕಗಳು, ಪೀಠೋಪಕರಣ ತಯಾರಿಕೆ, ದೋಣಿ ಮತ್ತು ಹಡಗು ನಿರ್ಮಾಣ ಮತ್ತು ಸಂಗೀತ ಉಪಕರಣಗಳಿಗೆ ಇದು ಬಹಳ ಜನಪ್ರಿಯವಾಗಿದೆ. ಇದನ್ನು ಕಾಫಿ ಮತ್ತು ಕೋಕೋ ತೋಟಗಳಲ್ಲಿ ನೆರಳು ಮರವಾಗಿಯೂ ಬಳಸಲಾಗುತ್ತದೆ.

**ಇದನ್ನು 15 ವರ್ಷಗಳ ನಂತರ ಟಿಂಬರ್ ಉದ್ದೇಶಗಳಿಗಾಗಿ ಬಳಸಬಹುದು**

**ಪ್ರತಿ ಮರದ ಪರಿಮಾಣ: 20 – 30 ಘನ ಅಡಿ**

**ಪ್ರತಿ ಘನ ಅಡಿಯ ಬೆಲೆ – ರೂ. 500**

**ಪ್ರತಿ ಮರದ ಬೆಲೆ: ರೂ. 10,000 – ರೂ 15,000**

**ಮಣ್ಣಿನ ಅವಶ್ಯಕತೆ:**

ಕ್ಷಾರೀಯ ಮತ್ತು ಆಮ್ಲೀಯವನ್ನು ಹೊರತುಪಡಿಸಿ ರಸಸಾರ ತಟಸ್ಥವಾದ ಎಲ್ಲಾ ರೀತಿಯ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ಆದರೆ ಇದಕ್ಕೆ ಉತ್ತಮ ಮಣ್ಣಿನ ಆಳ ಬೇಕಾಗುತ್ತದೆ - ಕನಿಷ್ಠ ಅವಶ್ಯಕತೆ 5 ಅಡಿಗಳು.

**ನೀರಿನ ಅವಶ್ಯಕತೆ:**

ಈ ಪ್ರಭೇದಕ್ಕೆ ನೀರಾವರಿ ಅಗತ್ಯವಿದೆ ಮತ್ತು ಬರವನ್ನು ತಾಳಿಕೊಳ್ಳುವ ಶಕ್ತಿ ಇಲ್ಲ. ನಾಟಿ ಮಾಡಿದ ಮೊದಲ ಎರಡು ವಾರಗಳಲ್ಲಿ, ಎರಡು ದಿನಗಳಿಗೊಮ್ಮೆ ನೀರುಣಿಸುವ ಅಗತ್ಯವಿರುತ್ತದೆ. ನಂತರ, ಮಣ್ಣು ಮತ್ತು ಹವಾಮಾನ ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಂಡು, ವಾರಕ್ಕೆ ಎರಡು ಬಾರಿ ನೀರು ಹಾಯಿಸಬಹುದು.

**ಸಮುದ್ರ ಮಟ್ಟದಿಂದ ಎತ್ತರ:**

100-500 ಮೀಟರ್

**ಸರಾಸರಿ ವಾರ್ಷಿಕ ತಾಪಮಾನ:**

16-32 ಡಿಗ್ರಿ ಸೆಂಟಿಗ್ರೇಡ್

**ಸರಾಸರಿ ವಾರ್ಷಿಕ ಮಳೆ:**

800-2500 ಮಿ.ಮೀ.



# ಟೀಕ್ / ಟೆಕ್ಟೋನಾ ಗ್ರ್ಯಾಂಡಿಸ್ / ತೇಗ

(ಗಟ್ಟಿ ಮರ)



ತೇಗದ ಮರವು ಪ್ರಪಂಚದ ಅಮೂಲ್ಯವಾದ ಚೌಬೀನೆ ಮರಗಳಲ್ಲಿ ಒಂದಾಗಿದೆ. ಅಟ್ಟ ಕಟ್ಟಲಿಕ್ಕೆ, ಪೀಠೋಪಕರಣಗಳ ತಯಾರಿಕೆಗೆ, ಕೋಟೆ ಕೊತ್ತಲಗಳ ರಚನೆಗೆ, ಸರ್ವ ಋತು ಬಾಗಿಲುಗಳು, ಕಟ್ಟಡ ನಿರ್ಮಾಣದಲ್ಲಿ ಅತಿ ಭಾರ ಹೊರುವ ಭಾಗಗಳಲ್ಲಿ, ಹಡಗು ಮತ್ತು ದೋಣಿಗಳ ನಿರ್ಮಾಣ ಮತ್ತು ಸೇತುವೆ ನಿರ್ಮಾಣಕ್ಕಾಗಿ ತೇಗದ ಮರ ಭಾರತದಲ್ಲಿ ವ್ಯಾಪಕವಾಗಿ ಬಳಕೆಯಾಗುತ್ತದೆ.

**ಇದನ್ನು 15 ವರ್ಷಗಳ ನಂತರ ಮರ-ಮುಟ್ಟುಗಳ ಉದ್ದೇಶಗಳಿಗಾಗಿ ಬಳಸಬಹುದು.**

**ಒಂದು ಮರದಿಂದ ದೊರೆಯುವ ಮರ-ಮುಟ್ಟಿನ ಘನ ಪ್ರಮಾಣ 20 ರಿಂದ 30 ಘನ ಅಡಿ**

**ಪ್ರತಿ ಘನ ಅಡಿಯ ಬೆಲೆ – ರೂ. 500 – ರೂ. 1,000 (ಸುತ್ತಳತೆ ಆಧರಿಸಿ)**

**ಪ್ರತಿ ಮರದ ಬೆಲೆ: ರೂ. 10,000 – ರೂ. 30,000**

**ಮಣ್ಣಿನ ಅವಶ್ಯಕತೆ:**

ನೀರು ನಿಂತ ಜಾಗಗಳಲ್ಲಿ ಹೊರತುಪಡಿಸಿ, ಇದನ್ನು ಎಲ್ಲಾ ಮಣ್ಣಿನ ಪ್ರಕಾರಗಳಲ್ಲಿ ಬೆಳೆಸಬಹುದು

**ಕನಿಷ್ಟ ಮಣ್ಣಿನ ಆಳ:** 5 ಅಡಿ

**ನೀರಿನ ಅವಶ್ಯಕತೆ:**

ಈ ಮರವು ಬರವನ್ನು ತಾಳಿಕೊಂಡು ಬೆಳೆಯಬಲ್ಲವು ಮತ್ತು ಮಳೆಯಾಶ್ರಿತ ಪರಿಸ್ಥಿತಿಯಲ್ಲಿಯೂ ಚೆನ್ನಾಗಿ ಬೆಳೆಯುತ್ತವೆ. ಮಣ್ಣಿನಲ್ಲಿ ತೇವಾಂಶದ ತೀವ್ರ ಕೊರತೆ ಉಂಟಾದಾಗ ಸ್ವಲ್ಪ ನೀರು ಉಣಿಸುವುದರಿಂದ ಬೆಳವಣಿಗೆ ಹೆಚ್ಚುತ್ತದೆ. ಮರಗಳು ಚೆನ್ನಾಗಿ ಬೆಳೆಯಲು ಮುಚ್ಚಿಗೆ (mulching) ಕಡ್ಡಾಯವಾಗಿದೆ. ಮಣ್ಣಿನಲ್ಲಿ ನೀರು ನಿಂತರೆ ಸಸಿಗಳು ರೋಗಪೀಡಿತವಾಗುತ್ತವೆ ಅಥವಾ ಬಾಡುತ್ತವೆ.

**ಸೂಕ್ತ ಆಲ್ಟಿಟ್ಯೂಡ್:**

ಸಮುದ್ರ ಮಟ್ಟದಿಂದ 1200 ಮೀಟರ್ ಎತ್ತರದವರೆಗೂ ಸೊಂಪಾಗಿ ಬೆಳೆಯುತ್ತವೆ.

**ಸರಾಸರಿ ವಾರ್ಷಿಕ ತಾಪಮಾನ:**

14-36 ಡಿಗ್ರಿ ಸೆಂಟಿಗ್ರೇಡ್ ಅನ್ನು ತಾಳಿ ಬೆಳೆಯುತ್ತವೆ

**ಸರಾಸರಿ ವಾರ್ಷಿಕ ಮಳೆ:**

1,200-2,500 ಮಿ.ಮೀ. ಸೂಕ್ತ (ಆದರೆ 600 ಮಿಮೀನಷ್ಟು ಕಡಿಮೆ ಅಥವಾ 4,000 ಮಿಮೀನಷ್ಟು ಅಧಿಕ ಮಳೆಯಲ್ಲಿಯೂ ಬೆಳೆಯುತ್ತವೆ)



# ರೆಡ್ ಸ್ಯಾಂಡರ್ಸ್ / ಟೀರೊಕಾರ್ಪಸ್ ಸ್ಯಾಂಟಲಿನಸ್ / ರಕ್ತ ಚಂದನ (ಗಟ್ಟಿಯಾದ ಮರ)



ಇದು ಅಮೂಲ್ಯವಾದ ಗಟ್ಟಿಮರದ ಜಾತಿಯಾಗಿದ್ದು, ಇದನ್ನು ಕೃಷಿ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ತಯಾರಿಸಲು ಬಳಸಲಾಗುತ್ತದೆ. ಈ ಮರ ವಿದೇಶದಲ್ಲಿ, ವಿಶೇಷವಾಗಿ ಚೀನಾ, ಜಪಾನ್ ಮತ್ತು ಪೂರ್ವ ಏಷ್ಯಾದಲ್ಲಿ ಭಾರಿ ಬೇಡಿಕೆಯನ್ನು ಹೊಂದಿದೆ, ಅಲ್ಲಿ ಇದನ್ನು ಸೌಂದರ್ಯವರ್ಧಕ ಉತ್ಪನ್ನಗಳು, ಪೀಠೋಪಕರಣಗಳು, ಸಂಗೀತ ಉಪಕರಣಗಳು, ಔಷಧಿಗಳನ್ನು ತಯಾರಿಸಲು ಮತ್ತು ಪರಮಾಣು ರಿಯಾಕ್ಟರ್‌ಗಳನ್ನು ತಂಪಾಗಿಸಲು ಬಳಸಲಾಗುತ್ತದೆ.

**ಇದನ್ನು 25 ವರ್ಷಗಳ ನಂತರ ಟಿಂಬರ್ ಉದ್ದೇಶಗಳಿಗಾಗಿ ಬಳಸಬಹುದು**

**ದಿಮ್ಮಿಯ (Heartwood) ಮೌಲ್ಯ: ರೂ2,000 - ರೂ5,000 ಪ್ರತಿ ಕೆ.ಜಿ.ಗೆ**

**ಪ್ರತಿಯೊಂದು ಮರವು: 50 - 100 ಕೆಜಿ ದಿಮ್ಮಿಯನ್ನು (Heartwood) ಉತ್ಪಾದಿಸುತ್ತದೆ (ಮಣ್ಣು ಮತ್ತು ಹವಾಮಾನ ಪರಿಸ್ಥಿತಿಗಳನ್ನು ಅವಲಂಬಿಸಿ) ಪ್ರತಿ ಮರದ ಮೌಲ್ಯ: ರೂ 1,00,000 -ರೂ 5,00,000**

### ಮಣ್ಣಿನ ಅವಶ್ಯಕತೆ:

ಮರದ ಹಾರ್ಟ್-ವುಡ್ ರೂಪುಗೊಳ್ಳಲು ಮರವನ್ನು ಕೆಂಪು ಕಲ್ಲು ಜರುಗು ಮಣ್ಣಿನಲ್ಲಿ ಬೆಳೆಸಬೇಕು. ಮರದ ರಚನೆಗೆ (ಸ್ಯಾಪ್‌ವುಡ್ ಮಾತ್ರ), ಇದನ್ನು ಎಲ್ಲಾ ಮಣ್ಣಿನ ಪ್ರಕಾರಗಳಲ್ಲಿ ಬೆಳೆಸಬಹುದು. ಸುತ್ತಳತೆಯ ಗಾತ್ರವು ಮಣ್ಣಿನ ಆಳಕ್ಕೆ ಅನುಗುಣವಾಗಿ ಹೆಚ್ಚಾಗುತ್ತದೆ.



### ನೀರಿನ ಅವಶ್ಯಕತೆ:

ಇದು ಬರವನ್ನು ತಾಳಿಕೊಳ್ಳುತ್ತದೆಯಾದರೂ, ಈ ಮರಕ್ಕೆ ಮಳೆ ಬೇಕು. ಮರಗಳ ಉಳಿವನ್ನು ಖಚಿತಪಡಿಸಿಕೊಳ್ಳಲು ಮುಚ್ಚಿಗೆ (mulching) ಕಡ್ಡಾಯವಾಗಿದೆ.

### ಸಮುದ್ರ ಮಟ್ಟದಿಂದ ಎತ್ತರ:

200-750 ಮೀಟರ್ ವರಗೆ

### ಸರಾಸರಿ ವಾರ್ಷಿಕ ತಾಪಮಾನ:

26 ಡಿಗ್ರಿ ಸೆಂಟಿಗ್ರೇಡ್

### ಸರಾಸರಿ ವಾರ್ಷಿಕ ಮಳೆ:

1600 ಮಿ.ಮೀ.

# ಸ್ಯಾಂಡಲ್ ವುಡ್ (ಶ್ರೀಗಂಧ) / ಸ್ಯಾಂಟಲಮ್ ಆಲ್ಬಂ / ಶ್ರೀಗಂಧದ ಮರ ಸೇಗು (ಗಟ್ಟಿ ಮರ) ಬಿಳಿ ಮರ



ಶ್ರೀಗಂಧವು ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ ಒಂದು ಅಮೂಲ್ಯವಾದ ಮರವಾಗಿದೆ ಮತ್ತು ಇದು ವಿಶ್ವದ ಅತ್ಯಂತ ದುಬಾರಿ ಮರಗಳಲ್ಲಿ ಒಂದಾಗಿದೆ. ಶ್ರೀಗಂಧದ ಕಾಂಡದ ತಿರುಳು ಮತ್ತು ಶ್ರೀಗಂಧದ ಎಣ್ಣೆ ಇವೆರಡೂ ಈ ಮರದ ಅತ್ಯಮೂಲ್ಯ ಉತ್ಪನ್ನಗಳಾಗಿವೆ. ಶ್ರೀಗಂಧದ ಕಾಂಡದ ತಿರುಳು ವಿಗ್ರಹಗಳ ತಯಾರಿಕೆಗೆ ಅತ್ಯುತ್ತಮ. ಶ್ರೀಗಂಧವು ಅರೆ ಪರಾವಲಂಬಿ ಸಸ್ಯವಾಗಿದೆ. ಇದು ಇತರ ಸಸ್ಯಗಳ ಬೆಂಬಲದೊಂದಿಗೆ ಬೆಳೆಯುತ್ತದೆ.

**ಇದನ್ನು 20-25 ವರ್ಷಗಳ ನಂತರ ಶೀಗಂಧದ ಮರದ ಉತ್ಪನ್ನಗಳಿಗಾಗಿ ಬಳಸಬಹುದು.**

**ರೂ. 5,000/ಕೆಜಿ**

**ಒಂದು ಮರದಲ್ಲಿ ಸರಾಸರಿ 15 - 25 ಕೆಜಿ ಕಾಂಡದ ತಿರುಳು ದೊರೆಯುತ್ತದೆ.**

**ಪ್ರತಿ ಮರದ ಬೆಲೆ: ರೂ. 75,000 - ರೂ1,25,000**

**ಮಣ್ಣಿನ ಅವಶ್ಯಕತೆ:**

ಕ್ಷಾರೀಯ ಮತ್ತು ಆಮ್ಲೀಯವನ್ನು ಹೊರತುಪಡಿಸಿ ಎಲ್ಲಾ ರೀತಿಯ ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ಮರದ ಸುತ್ತಳತೆಯು ಮಣ್ಣಿನ ಆಳಕ್ಕೆ ಅನುಗುಣವಾಗಿ ಹೆಚ್ಚಾಗುತ್ತದೆ

**ನೀರಿನ ಅವಶ್ಯಕತೆ:**

ಜೌಗು ಮಣ್ಣನ್ನು ಹೊರತುಪಡಿಸಿ, ಇದನ್ನು ಎಲ್ಲಾ ಮಣ್ಣಿನ ಪ್ರಕಾರಗಳಲ್ಲಿ ಬೆಳೆಸಬಹುದು. ಈ ಮರವು ಬರದಲ್ಲಿಯೂ ಬೆಳೆಯುವ ಶಕ್ತಿ ಹೊಂದಿದೆ. ಆದರೆ ಮೊದಲ 2 ವರ್ಷಗಳಲ್ಲಿ ನೀರಿನ ಅಗತ್ಯವಿರುತ್ತದೆ. ಮರದ ದಿಮ್ಮಿ ರಚನೆಯ ಅವಧಿಯಲ್ಲಿ ಬರಗಾಲದಂತಹ ನೀರಿನ ಸ್ಥಿತಿಯನ್ನು ಕಾಪಾಡಿಕೊಳ್ಳಬೇಕು. ಈ ಮರಗಳು ಉಳಿದು ಬೆಳೆಯಲು ಮುಚ್ಚಿಗೆ (mulching) ಅವಶ್ಯವಾಗಿ ಬೇಕು.

**ಸಮುದ್ರ ಮಟ್ಟದಿಂದ ಎತ್ತರ :**

600 - 1200 ಮೀಟರ್

**ಸರಾಸರಿ ವಾರ್ಷಿಕ ತಾಪಮಾನ:**

2 - 38 ಡಿಗ್ರಿ ಸೆಂಟಿಗ್ರೇಡ್

**ಸರಾಸರಿ ವಾರ್ಷಿಕ ಮಳೆ:**

450 - 3,000 ಮಿ.ಮೀ.



# ಮೆಲಿಯಾ ಡುಬಿಯಾ / ಮೆಲಿಯಾ ಡುಬಿಯಾ / ಹೆಬ್ಬೇವು (ಮೃದು ಮರ)



ಪ್ಲೈವುಡ್ ಮತ್ತು ಬೆಂಕಿಕಡ್ಡಿಗಳನ್ನು ತಯಾರಿಸಲು ಬಳಸಲಾಗುತ್ತದೆ, ಇದಕ್ಕೆ ಕಾಗದದ ಉದ್ಯಮದಲ್ಲಿ ಹೆಚ್ಚು ಬೇಡಿಕೆಯಿದೆ. ಕಾಗದದ ತಿರುಳನ್ನು ತಯಾರಿಸಲು ಇದರ ಮರವನ್ನು ಬಳಸಲಾಗುತ್ತದೆ. ಗೆದ್ದಲುಗಳಿಗೆ ಹೆಚ್ಚು ಪ್ರತಿರೋಧ ಇರುವುದರಿಂದಾಗಿ, 10 ವರ್ಷಕ್ಕಿಂತ ಮೇಲ್ಪಟ್ಟ ಮರಗಳನ್ನು ಬೀರುಗಳು, ಪೀಠೋಪಕರಣಗಳು, ಸಂಗೀತ ಉಪಕರಣಗಳು ಮತ್ತು ಪ್ಯಾಕಿಂಗ್ ಪದಾರ್ಥಗಳನ್ನು ತಯಾರಿಸಲು ಸಹ ಬಳಸಲಾಗುತ್ತದೆ

**ಇದನ್ನು 5 ವರ್ಷಗಳ ನಂತರ ಪ್ಲೈವುಡ್ ತಯಾರಿಕೆ ಮತ್ತು ಕಾಗದದ ತಿರುಳು ಉತ್ಪಾದನೆಗೆ ಬಳಸಬಹುದು**

**ಪ್ರತಿ ಮರದ ಮೌಲ್ಯ: ರೂ 2,000 - ರೂ 2,500.**

**ಮಣ್ಣಿನ ಅವಶ್ಯಕತೆ:**
ಸಡಿಲ ಮತ್ತು ಮೆಕ್ಕಲು ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ ಆದರೆ ಮರಕ್ಕೆ ಕನಿಷ್ಠ 5 ಅಡಿ ಮಣ್ಣಿನ ಆಳ ಬೇಕಾಗುತ್ತದೆ.

**ನೀರಿನ ಅವಶ್ಯಕತೆ:**
ಈ ಪ್ರಭೇದಕ್ಕೆ ನಿಯಮಿತವಾಗಿ ನೀರಾವರಿ ಅಗತ್ಯವಿರುತ್ತದೆ ಮತ್ತು ನೀರಿನ ಕೊರತೆ ತಾಳಿಕೊಳ್ಳಲಾರದು. ಮರಗಳ ಉಳಿವನ್ನು ಖಚಿತಪಡಿಸಿಕೊಳ್ಳಲು ಮುಚ್ಚಿಗೆ (mulching) ಕಡ್ಡಾಯವಾಗಿದೆ.

**ಸಮುದ್ರ ಮಟ್ಟದಿಂದ ಎತ್ತರ:**
600-1800 ಮೀಟರ್

**ಸರಾಸರಿ ವಾರ್ಷಿಕ ತಾಪಮಾನ:**
35-38 ಡಿಗ್ರಿ ಸೆಂಟಿಗ್ರೇಡ್

**ಸರಾಸರಿ ವಾರ್ಷಿಕ ಮಳೆ:**
625-875 ಮಿ.ಮೀ.



## ಮರ ಆಧಾರಿತ ಕೃಷಿಯನ್ನು ರೂಢಿಸಿಕೊಂಡು ಲಕ್ಷಾಧಿಪತಿಗಳಾಗಿ ಮತ್ತು ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಿಂದ ಪ್ರತಿ ಹೆಕ್ಟೇರಿಗೆ ರೂ. 50,000 ವರೆಗೆ ಪ್ರೋತ್ಸಾಹ ಧನ ಪಡೆಯಿರಿ

ಕಾವೇರಿ ಜಲಾನಯನ ಪ್ರದೇಶದ ರೈತರಲ್ಲಿ ಮರ ಆಧಾರಿತ ಕೃಷಿಯನ್ನು ಉತ್ತೇಜಿಸಲು ಕೃಷಿ ಅರಣ್ಯ ಪ್ರೊತ್ಸಾಹ ಯೋಜನೆಯ ಮೂಲಕ ಕರ್ನಾಟಕದ ಅರಣ್ಯ ಇಲಾಖೆಯೊಂದಿಗೆ ಈಶಾದ ಕಾವೇರಿ ಕೂಗು ಯೋಜನೆಯು ಕೆಲಸ ಮಾಡುತ್ತಿದೆ.

## ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ಏನನ್ನು ನೀಡುತ್ತದೆ

**ಕಡಿಮೆ ದರದಲ್ಲಿ ಸಸಿಗಳು:** ಕಾರ್ಯಕ್ರಮದ ಮಾರ್ಗಸೂಚಿಗಳ ಪ್ರಕಾರ, ರೈತರು, ಸಾರ್ವಜನಿಕರು ಮತ್ತು ಸಂಸ್ಥೆಗಳು ಸಸಿಗಳನ್ನು 5”x8”, 6”x9” ಗಾತ್ರದ ಬ್ಯಾಗ್ ಗಳಿಗೆ ಸಬ್ಸಿಡಿ ದರ ರೂ 1. ಗೆ ಮತ್ತು 8”x12” ಗಾತ್ರದ ಬ್ಯಾಗ್ ಗಳಿಗೆ ಸಬ್ಸಿಡಿ ದರ ರೂ. 3 ರಂತೆ ಪಡೆಯಬಹುದು.

**ಬದುಕುಳಿಯುವ ಸಸಿಗಳಿಗೆ ಪ್ರೋತ್ಸಾಹ ಧನ:** ಬದುಕುಳಿದಿರುವ ಪ್ರತಿ ಸಸಿಗಳಿಗೆ 125 ರೂ. ರಂತೆ, ಪ್ರತಿ ಹೆಕ್ಟೇರ್ ಗೆ ರೂ. 50,000 ವರೆಗೂ ನೀಡಲಾಗುತ್ತದೆ.

ರೂ. 35, ಮೊದಲ ವರ್ಷದ ಕೊನೆಯಲ್ಲಿ, ರೂ. 40 ಎರಡನೇ ವರ್ಷದಲ್ಲಿ ಹಾಗೂ ಮೂರನೇ ವರ್ಷದಲ್ಲಿ 50 ರೂ. ರೈತರು ತಾವು ಬಯಸಿದಷ್ಟು ಸಸಿಗಳನ್ನು ನೆಡಬಹುದು, ಆದಾಗ್ಯೂ ಪ್ರೋತ್ಸಾಹ ಧನವು ಪ್ರತಿ ಹೆಕ್ಟೇರಿಗೆ 400 ಮರಗಳವರೆಗೆ ಲಭ್ಯವಿದೆ.

## ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ಕಾರ್ಯಕ್ರಮಕ್ಕೆ ಇರುವ ನೋಂದಣಿ ಪ್ರಕ್ರಿಯೆ:

ನಿಮ್ಮ ಹತ್ತಿರದ ಅರಣ್ಯ (ರೇಂಜ್ ಆಫೀಸ್) ಕಚೇರಿಗೆ ಈ ಕೆಳಗಿನ ದಾಖಲಾತಿಗಳ ಜೊತೆ ಭೇಟಿ ನೀಡಬೇಕು.

1.) ನಿಮ್ಮ ಪಹಣಿ ಅಥವಾ ಆರ್‌ಟಿಸಿಯ ಒಂದು ಪ್ರತಿ,

2.) ಬ್ಯಾಂಕ್ ಪಾಸ್‌ಬುಕ್ ನ ಪ್ರತಿ

3.) ಆಧಾರ್ ಕಾರ್ಡ್‌ನ ಒಂದು ಪ್ರತಿ (ಮೂಲಪ್ರತಿಯ ಜೊತೆ)ಮತ್ತು

4.) 2 ಪಾಸ್‌ಪೋರ್ಟ್ ಅಳತೆಯ  ಫೋಟೋಗಳು

ನೀವು ನೋಂದಣಿ ಫಾರ್ಮ್ ಅನ್ನು ಭರ್ತಿ ಮಾಡಬೇಕು  ಮತ್ತು  ನಿಮ್ಮ ಕೃಷಿಭೂಮಿಯ ರೇಖಾಚಿತ್ರವನ್ನು ಬಿಡಿಸಬೇಕು. ನೋಂದಣಿ ಶುಲ್ಕವಾಗಿ ರೂ. 10  ಪಾವತಿಸಬೇಕು.

## ಮರಗಳನ್ನು ಇಂದೇ ನೆಡಿ

- ನಿಮಗೆ ತಿಳಿದಿರುವಂತೆ, ಈ ಋತುವಿನಲ್ಲಿ (ಮುಂಗಾರು) ಮರಗಳನ್ನು ನೆಡುವುದು ಅವುಗಳ ಉತ್ತಮ ಬೆಳವಣಿಗೆಯನ್ನು ಖಚಿತಪಡಿಸುತ್ತದೆ.
- ನೀವು ಮರಗಳನ್ನು ನಿಮ್ಮ ಸಂಪೂರ್ಣ ಭೂಮಿಯಲ್ಲಿ ನೆಡಬಹುದು ಅಥವಾ ನಿಮ್ಮ ಭೂಮಿಯ ಬದುವಿನಲ್ಲಿ ಮಾತ್ರ ನೆಡಬಹುದು ಮತ್ತು ನಿಯಮಿತ ಬೆಳೆಗಳನ್ನು ಬೆಳೆಯುವುದನ್ನು ಮುಂದುವರೆಸಬಹುದು.

**ಹೆಚ್ಚಿನ ಮಾಹಿತಿಗಾಗಿ ಕಾವೇರಿ ಕೂಗು ಸಹಾಯವಾಣಿ - 80009 80009 ಗೆ ಕರೆ ಮಾಡಿ**